ತೆಗೆದುಕೊಳ್ಳಬೇಕೆಂದು ಕಾನೂನಿದೆ. ಆದರೆ ಆರು ತಿಂಗಳಾದರೂ ಇದುವರೆಗೆ ಕ್ರಮಜರುಗಿಸಿಲ್ಲ. ಏಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂಬುದು ನನ್ನ ಪ್ರಶ್ನೆ? ಇದರ ಬಗ್ಗೆ ಎಂದು ಕ್ರಮ ತೆಗೆದುಕೊಳ್ಳುತ್ತೀರಿ? ಈ 18% ಹಣದ ದುರುಪಯೋಗದ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಸದನದ ಸಮಿತಿ ರಚನೆ ಮಾಡಿ ಆ ನಗರ ಸಭೆಗೆ ಕಳುಹಿಸಿ ಅಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತನಿಖೆ ಮಾಡಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ 3–10–2006 ರಲ್ಲೇ ಪೌರಾಡಳಿತ ಇಲಾಖೆಗೆ ಲೋಕಾಯುಕ್ತರ ವರದಿ ಬಂದಿದೆ. ಅದರ ಮೇಲೆ ಎರಡು ರೀತಿಯ ಕ್ರಮ ಜರುಗಿಸಲು ಲೋಕಾಯುಕ್ತರು ಸೂಚನೆ ಮಾಡಿದ್ದಾರೆ. ಒಂದು, ಸರ್ಕಾರಕ್ಕೇನು ನಷ್ಟವಾಗಿದೆ ಅದನ್ನು ವಸೂಲಿ ಮಾಡಬೇಕು. ಎರಡನೆಯದ್ದು,

ಶ್ರೀ ಎ. ಪಾಪರೆಡ್ಡಿ :– ಯಾರ್ಯಾರು ಸರ್ಕಾರಿ ನೌಕರರಿದ್ದಾರೆ ಅವರ ಹೆಸರುಗಳನ್ನು ಕೇಳಿ ಅದು ದಾಖಲೆಗೆ ಹೋಗಲಿ.

ಶ್ರೀ ಆರ್. ಅಶೋಕ್ :– ಲೋಕಾಯುಕ್ತರು ಅಲ್ಲಿನ ಅಧಿಕಾರಿಗಳು ಯಾರಿದ್ದಾರೆ ಮತ್ತು ಅಧ್ಯಕ್ಷರು ಯಾರಿದ್ದಾರೆ ಅವರ ಮೇಲೆ ಪಕ್ಕಾ ಆಪಾದನೆಯನ್ನು ಮಾಡಿದ್ದಾರೆ. ಅವರು ಅವ್ಯವಹಾರ ಮಾಡಿದ್ದಾರೆಂದು ಲೋಕಾಯುಕ್ತರು ವರದಿ ಕೊಟ್ಟಿದ್ದಾರೆ. ಎರಡನೆಯದು, ಅದರಲ್ಲಿ ಯಾರು ಇಂಜಿನಿಯರ್ಸ್ ಭಾಗಿಯಾಗಿದ್ದರು ಅವರ ಮೇಲೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳಿಯೆಂದು ವರದಿಯಲ್ಲಿ ಹೇಳಿದ್ದಾರೆ. ಅವರ ಮೇಲೆ ಕ್ರಮ ಜರುಗಿಸಬೇಕೆಂದು ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಮಾಡಿದ್ದೇವೆ. ಯಾರು ತಪ್ಪಿತಸ್ಥರಾಗಿದ್ದಾರೆ, ಲೋಕಾಯುಕ್ತದವರೇನು ವರದಿ ಕೊಟ್ಟಿದ್ದಾರೆ ಅದರ ಪ್ರಕಾರ ಅಲ್ಲಿನ ಅಧ್ಯಕ್ಷರಿರಬಹುದು, ಅಧಿಕಾರಿಗಳಿರಬಹುದು ಅವರ ಮೇಲೆ ಸೂಕ್ತ ಕ್ರಮವನ್ನು ಪೌರಾಡಳಿತ ಇಲಾಖೆ ತೆಗೆದುಕೊಳ್ಳುತ್ತದೆ.

6) ವಿಷಯ :– ಮೂಡಿಗೆರೆಯಲ್ಲಿ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸಿದ ರೈತರ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) :– ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕುಂದೂರು, ಸಾರಗೋಡು ಹಾಗೂ ಬೈರಗದ್ದೆ ಅರಣ್ಯ ಪ್ರದೇಶಗಳಿಂದ ಒಕ್ಕಲೆಬ್ಬಿಸಿದ ರೈತರುಗಳಿಗೆ ಬದಲಿ ಭೂಮಿಯನ್ನು ನೀಡದಿರುವ ಬಗ್ಗೆ ಅರಣ್ಯ ಪರಿಸರದ ಹಾಗೂ ಜೀವಿಶಾಸ್ತ್ರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಸಚಿವರು) (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ) :– ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸಾರಗೋಡು ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ಅರಣ್ಯ ಭೂಮಿಯ ಅತಿಕ್ರಮಣಗಳನ್ನು ಖಿಲ್ಲಾಪಡಿಲಾಗುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಇದರಿಂದ ಖಿಲ್ಲಾಪಡಿಸಲಾದ ಭೂರಹಿತ

ಅತಿಕ್ರಮಣದಾರರಿಗೆ ಪುನರ್ವಸತಿ ಕಾರ್ಯವನ್ನು ಕರ್ನಾಟಕ ಸರ್ಕಾರವು ಕೈಗೊಂಡಿರುತ್ತದೆ. ಈ ಪುನರ್ವಸತಿ ಯೋಜನೆಯ ಪ್ರಕಾರ ಸಾಗುವಳಿ ಜಮೀನು ಕಳೆದುಕೊಂಡ ಭೂರಹಿತರಿಗೆ ಕುಟುಂಬಕ್ಕೆ ತಲಾ 2 ಎಕರೆ ಜಮೀನನ್ನು ನೀಡುವ ಬಗ್ಗೆ ಸರ್ಕಾರವು ಅಂಗೀಕಾರ ನೀಡಿರುತ್ತದೆ. ಈ ಉದ್ದೇಶಕ್ಕೆ ಲಭ್ಯವಿರುವ ಮತ್ತು ಯೋಗ್ಯವಾದಂತಹ ಕಂದಾಯ ಜಮೀನನ್ನು ಪಲ್ಗುಣಿ, ಜಿ. ಹೊಸಹಳ್ಳಿ, ಜಿ. ಅಗ್ರಹಾರ ಗ್ರಾಮಗಳಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಯು ಪರಿಶೀಲಿಸಿರುತ್ತಾರೆ. ಇದರಲ್ಲಿ ಅತಿ ಸೂಕ್ಷ್ಮವಾದಂತಹ ಪಲ್ಗುಣಿ ಗ್ರಾಮದ ಸ.ನಂ.133 ರಲ್ಲಿ 40 ಎಕರೆ ಮತ್ತು ಜಿ. ಹೊಸಹಳ್ಳಿ ಗ್ರಾಮದ ಸ.ನಂ. 14, 181, 182 ಮತ್ತು 183 ಗಳಲ್ಲಿ ಒಟ್ಟು 112 ಎಕರೆ ಜಮೀನಿನ ಮಂಜೂರಾತಿಯನ್ನು ಈಗಾಗಲೇ ನೀಡಿರುತ್ತಾರೆ. ಇದನ್ನು ಅನುಸರಿಸಿ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆಯವರು ಈಗಾಗಲೇ ಕೆಲವು ಅರ್ಹ ಸಂತ್ರಸ್ತರಿಗೆ ಭೂ ಮಂಜೂರಾತಿಯನ್ನು ನೀಡಿರುತ್ತಾರೆ.

ಜಿ.ಅಗ್ರಹಾರ ಸ.ನಂ. 247 ಮತ್ತು 565 ರಲ್ಲಿ 240 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಯು 2001 ರಲ್ಲಿ ಬೆಳೆಸಲಾದ ನೆಡುತೋಪು ಇರುತ್ತದೆ. ಇದು 2009–2010 ರ ವರ್ಷದಲ್ಲಿ ಮಾತ್ರ ಕಡಿತಲೆಗೆ ಬರುತ್ತದೆ. ಈ ಕಾರಣದಿಂದಾಗಿ ತಕ್ಷಣಕ್ಕೆ ಈ ಸ.ನಂ. ನಲ್ಲಿ ಭೂಮಿಯು ಲಭ್ಯವಿರದ ಕಾರಣಕ್ಕಾಗಿ ಪುನರ್ವಸತಿಗಾಗಿ ಪರಿಗಣಿಸಲು ಸಾಧ್ಯವಾಗಲಿಲ್ಲ. ಇದಲ್ಲದೆ ಈ ಭೂಮಿ ಸಾಗುವಳಿ ಮಾಡಲೂ ಸಹ ಅಷ್ಟಾಗಿ ಸೂಕ್ತವಾಗಿರುವುದಿಲ್ಲ.

ಆದರೆ ಪಾಲ್ಗುಣಿ ಮತ್ತು ಜಿ. ಹೊಸಹಳ್ಳಿ ಗ್ರಾಮಗಳಲ್ಲಿ ಪುನರ್ವಸತಿಗಾಗಿ ಮಂಜೂರಾತಿ ನೀಡಿದ ಜಮೀನಿನಲ್ಲಿದ್ದಂತಹ ನೆಡುತೋಪುಗಳನ್ನು ಸಾಮಾಜಿಕ ಅರಣ್ಯ ವಿಭಾಗದವರು ಕಳೆದ ವರ್ಷ ಕಡಿತಲೆ ಮಾಡಿರುವುದರಿಂದ ಈ ಜಮೀನು ಪುನರ್ವಸತಿಗಾಗಿ ತಕ್ಷಣಕ್ಕೆ ಲಭ್ಯವಿರುತ್ತದೆ. ಈ ಜಮೀನು ಬೇಸಾಯಕ್ಕೆ ಸೂಕ್ತವಾಗಿರುತ್ತದೆ ಹಾಗೂ ಡಾಮರು ರಸ್ತೆಯ ಪಕ್ಕದಲ್ಲೇ ಇರುತ್ತದೆ. ಇದಲ್ಲದೆ, ಸಂತ್ರಸ್ಥರಿಗೆ ಸದರಿ ಜಾಗದಲ್ಲಿ ಭೂಮಿಯಲ್ಲದೇ ಮನೆ ಕಟ್ಟಲೂ ಕೂಡ ಸೌಕರ್ಯ ನೀಡಲಾಗುತ್ತದೆ. ಆದ್ದರಿಂದ ಸದರಿಯವರಿಗೆ ಯಾವ ರೀತಿಯ ಅನಾನುಕೂಲವಾಗುವುದಿಲ್ಲ.

(8:00 pm)

ಶ್ರೀ ಎಂ.ಪಿ. ಕುಮಾರಸ್ವಾಮಿ :– ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟಂತಹ ಅರಣ್ಯ ಒತ್ತುವರಿದಾರರಿಗೆ ಸರಿಯಾದ ರೀತಿಯಲ್ಲಿ ನ್ಯಾಯ ಕೊಡಬೇಕೆಂದು ಹೇಳಿ ಒಂದು ಸಮಿತಿಯನ್ನು ಕಳುಹಿಸಿದ್ದರು. ಆ ಸಮಿತಿಯಲ್ಲಿ ಎಲ್ಲಾ ಇಲಾಖೆಯ principal Secretary ಗಳು ಇದ್ದರು. ಅಭಿಜಿತ ದಾಸ್ ಗುಪ್ತ, principal Secretary to Government ಮತ್ತು ಶ್ರೀ ಜಾಮ್‌ದಾರ್, principal Secretary of Revenue Department ಹೀಗೆ ಸುಮಾರು 11 ಜನರ ರಾಜ್ಯ ಮಟ್ಟದ High Power

Committee ಯೊಂದನ್ನು ಕಳುಹಿಸಿದ್ದರು. ಅದರ ಪ್ರಕಾರ, ಜಿ. ಅಗ್ರಹಾರದಲ್ಲಿ 247 ನೇ ಸರ್ವೆ ನಂಬರ್ ಕೊಡಬೇಕೆಂದು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಿದೆ. ಇದೇ ಜಮೀನನ್ನು ಕೊಡಬೇಕೆಂದು ಆದೇಶ ಕೂಡ ಆಗಿತ್ತು. ಆ ನಂತರದಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿ. ಹೊಸಹಳ್ಳಿ ಎಂದು ಸೇರಿಸಿ ಕಳುಹಿಸಿದ್ದಾರೆ. ಸಮಿತಿ ಕೊಡಿ ಎಂದು ಹೇಳುವಂತಹ ಭೂಮಿಯನ್ನು ಇವತ್ತು ಜಿಲ್ಲಾ ಮಟ್ಟದಲ್ಲಿ ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳುವುದಕ್ಕೆ ಏನು ರೈಟ್ಸ್ ಇದೆ? ಇದನ್ನು ಸಾಮಾಜಿಕ ಅರಣ್ಯ ಇಲಾಖೆಗೆಂದು ತೆಗೆದುಕೊಂಡು, ಜಿಲ್ಲಾ ಪಂಚಾಯತಿಗೆ ಬರೆದು ಕೊಟ್ಟಿರುತ್ತಾರೆ. ನಮಗೆ ಯಾವಾಗ ಬೇಕೋ ಆಗ ನಾವು ಕೇಳುತ್ತೇವೆ, ಆಗ ನೀವು ಕೊಡಬೇಕು ಎನ್ನುವಂತಹ ಒಂದು ಕಂಡಿಷನ್ ಮೇಲೆ ತೆಗೆದುಕೊಂಡಿರುತ್ತಾರೆ. ರೆವಿನ್ಯೂ ಇಲಾಖೆಯನ್ನು ಕೇಳುವಂತಹ ಯಾವುದೇ ತರವಾದಂತಹ ಹಕ್ಕು ಇವರಿಗಿಲ್ಲ. ನಮಗೆ ಪುನರ್‌ವಸತಿ ಕಲ್ಪಿಸಿ ನಾಲ್ಕು ಜನರಿಗೆ ಉದ್ಯೋಗ ಕೊಡುವುದು, ಅದೂ ಕೂಡ ತೀರ್ಮಾನವಾಗಬೇಕು. ಆ ಪ್ರಕಾರ ಪಲ್ಗುಣಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಜಿ. ಅಗ್ರಹಾರದ್ದು ನಾವು ಕೇಳಬೇಕು. ಏಕೆಂದರೆ, ಪುನರ್‌ವಸತಿ ಎಂದರೆ ಮಕ್ಕಳಿಗೆ ಶಾಲೆ ಬೇಕು, ಅಲ್ಲಿ ಹೋಗುವಂತಹವರಿಗೆ ಕೂಲಿ ಬೇಕು, ಕೂಲಿ ಸಿಗದೇ ಈಗಾಗಲೇ ಬಹಳ ಕಷ್ಟವಾಗಿದೆ. ಜಿ. ಹೊಸಹಳ್ಳಿ ನಮಗೆ ವಾಸ ಮಾಡುವುದಕ್ಕೆ ಯೋಗ್ಯವಲ್ಲಿ. ಅದನ್ನು ಅಲ್ಲಿಯ ಪುನರ್‌ವಸತಿದಾರೂ ಕೂಡ ಹೇಳಿದ್ದಾರೆ. ಆದ್ದರಿಂದ ನಮಗೆ ಜಿ. ಅಗ್ರಹಾರದ ಜಮೀನನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ನಮಗೆ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಆರ್. ಅಶೋಕ್ :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂಬ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಮಂತ್ರಿಯವರ ಜೊತೆಗೆ ಇದರ ಬಗ್ಗೆ ಮಾತನಾಡಲಾಗಿದೆ. ಆದ್ದರಿಂದ, ಅವರ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ.

ಛೇರ್ಮನ್ :– ಮಾನ್ಯ ಮೆಂಡನ್‌ರವರೆ, ತಮ್ಮ ಗಮನ ಸೆಳೆಯುವ ಬಗ್ಗೆ ಉತ್ತರಿಸಲು ಸರ್ಕಾರದವರು ಸಮಯಾವಕಾಶವನ್ನು ಕೇಳಿದ್ದಾರೆ. ತಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಪ್ರಸ್ತಾಪಿಸಲು ಮುಂದೆ ಅವಕಾಶ ಕೊಡಲಾಗುವುದು. ಈಗ ದಯವಿಟ್ಟು ಕುಳಿತುಕೊಳ್ಳಿ.